ಸುದ್ದಿ ಧಾರವಾಡ:- ಕರ್ನಾಟಕ ಮಹಾವಿದ್ಯಾಲಯದ ಸಂಸ್ಥಾಪಕರ ದಿನಾಚರಣೆ

ದಿನಾಂಕ:-09-08-2024ರಂದು ಕರ್ನಾಟಕ ಮಹಾವಿದ್ಯಾಲಯದ ಸಂಸ್ಥಾಪಕರ ದಿನಾಚರಣೆ ಯನ್ನು ಆಚರಿಸಲಾಯಿತು.

ಸಂಸ್ಥಾಪಕರ ದಿನಾಚರಣೆಯ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಎಸ್‌ಜೆಎಂವಿ ಕಾಲೇಜಿನ ಮಾಜಿ ಪ್ರಾಂಶುಪಾಲರು ಶ್ರೀ.ಬಾಳಿಕಾಯಿ ಸರ್ ಆಗಮಿಸಿದ್ದರು. ನಂತರ ಶ್ರೀ.ಬಾಳಿಕಾಯಿ ಸರ್ ಮತ್ತು

ಕರ್ನಾಟಕ ವಿಜ್ಞಾನ ಮತ್ತು ಕಲಾ ಮಹಾವಿದ್ಯಾಲಯಗಳ ಪ್ರಾಚಾರ್ಯರಾದ ಪ್ರೊ.(ಶ್ರೀಮತಿ)ಎಮ್.ಎಸ್.ಸಾಳುಂಕೆ ಮತ್ತು ಪ್ರೊ.ಡಿ.ಬಿ.ಕರಡೋಣಿಯವರು ಸಂಸ್ಥಾಪಕರ ಪ್ರತಿಮೆ ಗಳಿಗೆ ಹೂವಿನ ಹಾರಗಳನ್ನು ಹಾಕಿ ನಮಸ್ಕರಿಸಿದರು.

ಕರ್ನಾಟಕ ಮಹಾವಿದ್ಯಾಲಯವನ್ನು 1917ರಲ್ಲಿ ಕರ್ನಾಟಕ ಮಹಾವಿದ್ಯಾಲಯವನ್ನು ದಿವಂಗತ ದಿವಾನ್ ಬಹದ್ದೂರ್ ರೊದ್ದ ಶ್ರೀನಿವಾಸ ರಾವ್,

ದಿವಂಗತ ರಾವ್ ಬಹದ್ದೂರ್ ಆರ್.ಸಿ.ಅರಟಾಳ್, ದಿವಂಗತ ಸರ್ ಸಿದ್ದಪ್ಪ ಕಂಬಳಿಯವರು ಸ್ಥಾಪನೆ ಮಾಡಿದರು ಮತ್ತು ಉಳಿಸಿ ಬೆಳೆಸಿದವರು ಪದ್ಮಭೂಷಣ ಡಾ.ಡಿ.ಸಿ.ಪಾವಟೆಯವರು.

ಕರ್ನಾಟಕ ಮಹಾವಿದ್ಯಾಲಯವು ಉತ್ತರ ಕರ್ನಾಟಕದಲ್ಲೇ ಒಂದು ಹೆಮ್ಮೆಯ ಮಹಾವಿದ್ಯಾಲಯವಾಗಿದ್ದು,ಲಕ್ಷಾಂತರ ವಿದ್ಯಾರ್ಥಿಗಳಿಗೆ ನೂರಾರು ವರ್ಷಗಳಿಂದ ವಿದ್ಯೆಯನ್ನು ಧಾರೆಯೆರೆಯುತ್ತಾ ಬರುತ್ತಿದೆ. ಈ ಕಾಲೇಜಿನಲ್ಲಿ ಕಲಿತಂತಹ ವಿದ್ಯಾರ್ಥಿಗಳು ದೇಶ-ವಿದೇಶಗಳಲ್ಲಿ ವಿಜ್ಞಾನಿಗಳಾಗಿ,ಡಾಕ್ಟರ್ ಗಳಾಗಿ,ಜಿಲ್ಲಾಧಿಕಾರಿಗಳಾಗಿ,ತಹಶೀಲ್ದಾರ್ ಗಳಾಗಿ, ಇಂಜನಿಯರಗಳಾಗಿ,ಪ್ರಾಧ್ಯಾಪಕರಾಗಿ,ಉಪನ್ಯಾಸಕರಾಗಿ,ಶಿಕ್ಷಕರಾಗಿ,ಪೋಲಿಸ್ ಅಧಿಕಾರಿಗಳಾಗಿ, ಸಾಹಿತಿಗಳಾಗಿ,ಕವಿಗಳಾಗಿ ವಿವಿಧ ವಿಭಾಗಗಳ ಮೇಲ್ವಿಚಾರಕರಾಗಿ,ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಚೇರಮನ್ ರಾದ ಡಾ.(ಶ್ರೀಮತಿ) ವಿ.ಬಿ.ಸಾವಿರಮಠ, ಪ್ರೊ.ಬ್ಲೇಸ್.ಲೋಬೊ,ಪ್ರೊ.ಕೆ.ಕೊಟ್ರೇಶಾ,

ಮಾಜಿ ಅಕಾಡೆಮಿಕ್ ಕೌನ್ಸಿಲ್ ಸದಸ್ಯರು ಮತ್ತು ಸಿಂಡಿಕೇಟ್ ಸದಸ್ಯರು,ಕಾಲೇಜಿನ ಜಿಮಖಾನಾ ಉಪಾಧ್ಯಕ್ಷ ಪ್ರೊ.ಜೆ.ಟಿ.ಗುಡಗೂರ,ಡಾ.ಎಂ.ಆರ್. ಹಿರೇಮಠ,ಪ್ರೊ.ಮುಕುಂದ್ ಲಮಾಣಿ,ಪ್ರೊ.ಜಾಧವ್, ಡಾ.ಜಿ.ಎನ್.ಕುಮ್ಮೂರ,ಡಾ.ಐ.ಸಿ.ಮುಳುಗುಂದ.

ಮತ್ತು ವಿವಿಧ ವಿಭಾಗದ ಮುಖ್ಯಸ್ಥರು ಹಾಗೂ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು,ವಿದ್ಯಾರ್ಥಿಗಳು ಹಾಜರಿದ್ದರು.

ಮಾಹಿತಿ ಲೇಖಕರು:-ಶ್ರೀ.ನವೀನ ಪ್ಯಾಟಿಮನಿ (ಟ್ಯಾಕ್ಸಿಡರ್ಮಿಸ್ಟ,ಪ್ರಾಣಿಶಾಸ್ತ್ರ ವಿಭಾಗ,ಕೆಸಿಡಿ)









